ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಸೋಮವಾರ, ದಿನಾಂಕ: 22ನೇ ಜುಲೈ, 2019

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗೆ ಕುಮಾರನಾಯಕ್ ವರದಿಯನ್ವಯ ಒಂದು ಹೆಚ್ಚುವರಿ ವೇತನ ಬಡ್ತಿ ನೀಡುವ ಬಗ್ಗೆ

ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) -

89 (662) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕುಮಾರ್ ನಾಯಕ್ ವರದಿಯ ಅನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಶಿಕ್ಷಕ/ಸಿಬ್ಬಂದಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ನೀಡಿದ ಒಂದು ವಿಶೇಷ ಬಡ್ತಿಯನ್ನು ನೀಡುವ ಕಾರ್ಯ ಯಾವ ಹಂತದಲ್ಲಿದೆ ;

(ಆ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಶಿಕ್ಷಕ/ಸಿಬ್ಬಂದಿಗಳಿಗೆ ಒಂದು ವಿಶೇಷ ವೇತನ ಬಡ್ತಿಯನ್ನು ನೀಡುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ; ಯಾವ ಕಾರಣಕ್ಕಾಗಿ ಈ ಕಾರ್ಯ ವಿಳಂಬವಾಗಿದೆ ; ಇರುವ ಅಡೆತಡೆಗಳೇನು ;

(ಇ) ಯಾವ ಕಾಲಮಿತಿಯೊಳಗೆ ಈ ನೌಕರರಿಗೆ ಈ ಸೌಲಭ್ಯವನ್ನು ಒದಗಿಸಲಾಗುವುದು ? (ಸ್ಪಷ್ಟ ನಿಲುವಿನೊಂದಿಗೆ ವಿವರವನ್ನು ಒದಗಿಸುವುದು)